ಜಿಲ್ಲಾವಾರು ಮಾಹಿತಿ.

೧.	ಬೆಂಗಳೂರು (ನಗರ ಮತ್ತು ಗ್ರಾಮಾಂತರ)	೮,೫೭,೧೬೭
೨.	ತುಮಕೂರು	೩,೪೦,೭೦೮
೩.	ಕೋಲಾರ	೩,೩೩,೪೯೨
೪.	ಚಿತ್ರದುರ್ಗ	೨,೬೯,೮೪೪
೫.	ಶಿವಮೊಗ್ಗ	೨,೭೬,೦೫೪
೬.	ಮೈಸೂರು	೩,೬೨,೬೮೫
೭.	ಮಂಡ್ಯ	೨,೨೫,೮೧೯
೮.	ಕೊಡಗು	೭೪,೩೮೫
೯.	ದಕ್ಷಿಣ ಕನ್ನಡ	೪,೬೯,೨೧೬
೧೦.	ಹಾಸನ	೨,೧೦,೬೯೮
೧೧.	ಚಿಕ್ಕಮಂಗಳೂರು	೧,೪೧,೬೩೭
೧೨.	ಬೆಳಗಾಂ	೪,೭೬,೭೯೦
೧೩.	ಉತ್ತರ ಕನ್ನಡ	೧,೮೫,೫೪೦
೧೪.	ಬಿಜಾಪುರ	೩,೯೦,೪೦೨
೧೫.	ಧಾರವಾಡ	೪,೯೪,೪೬೮
೧೬.	ಗುಲ್ಬರ್ಗ	೨,೯೫,೪೯೬
೧೭.	ರಾಯಚೂರು	೨,೦೫,೦೪೮
೧೮.	ಬೀದರ್	,೭೦,೬೭೧೧
೧೯.	ಬಳ್ಳಾರಿ	೨,೧೮,೯೮೬

ಆ) ಡಿಸೆಂಬರ್ ೧೯೮೭ರವರೆವಿಗೆ ಖರ್ಚಾದ ಮೊಬಲಗೂ ರೂ. ೪,೬೧,೩೦,೯೮೫.

ಇ) ಒಟ್ಟಾರೆ ಪಠ್ಯ ಪುಸ್ತಕ ವಿತರಣೆ ಸಮರ್ಪಕವಾಗಿ ನಡೆದಿದೆ.

ಈ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳು
ಯಾಂತ್ರೀಕೃತ ದೋಣಿಗಳ ವಿತರಣೆ

ಶ್ರೀ ಆರ್. ಎನ್. ನಾಯಕ್ (ಭಟ್ಕಳ).— ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫ರಿಂದ ಈ ತನಕ ಪ್ರತಿ ವರ್ಷ ಎಷ್ಟು ಯಾಂತ್ರೀಕೃತ ದೋಣಿಗಳನ್ನು ಸಹಾಯಧನ ಮೂಲಕ ಕರಾವಳಿಯ ಮೀನುಗಾರರಿಗೆ ನೀಡಲಾಯಿತು ?

ಆ) ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನೀಡಿದ ಯಾಂತ್ರೀಕೃತ ದೋಣಿಗಳೆಷ್ಟು ?

ಇ) ೧೯೮೫ರಿಂದ ಈ ತನಕ ಭಟ್ಕಳ, ಹೊನ್ನಾವರ, ಕಂಬಂಟಾ, ಅಂಕೋಲಾ, ಕಾರವಾರ ತಾಲ್ಲೂಕಿನ ಹರಿಜನ ಮೀನಗಾರರಿಗೆ ನೀಡಿದ ದೋಣಿಗಳೆಷ್ಟು ?

ಈ) ಈ ಯೋಜನೆಯು ಜಾರಿಯಲ್ಲಿದೆಯೇ ?

ಉ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಂ. ರಘುಪತಿ (ಬಂದರು ಮತ್ತು ವಿಮಾನಂಗಾರಿಕೆ ಸಚಿವರು).—

ಅ) ಕರಾವಳಿ ವಿಮಾನುಗಾರರಿಗೆ ಸಹಾಯಧನದ ಮೂಲಕ ಮಂಜೂರಾದ ಯಾಂತ್ರೀಕೃತ ದೋಣಿಗಳ ವಿವರ ಈ ಕೆಳಗಿನಂತಿವೆ.

ವರ್ಷ	ದೋಣಿಗಳ ಸಂಖ್ಯೆ
೧೯೮೫–೮೬	೩೫
೧೯೮೬–೮೭	೨೮
೧೯೮೭–೮೮	೧೩

(ಡಿಸೆಂಬರ್ ೮೭ರ ವರೆಗೆ)

ಆ) ಜಿಲ್ಲಾವಾರು (ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ) ಯಾಂತ್ರೀಕೃತ ದೋಣಿಗಳ ವಿವರ ವನ್ನು ಕೆಳಗೆ ಕೊಡಲಾಗಿದೆ.

ವರ್ಷ	ಉತ್ತರ ಕನ್ನಡ ಜಿಲ್ಲೆ	ದಕ್ಷಿಣ ಕನ್ನಡ ಜಿಲ್ಲೆ
೧೯೮೫–೮೬	೬	೨೯
೧೯೮೬–೮೭	೫	೨೩
೧೯೮೭–೮೮	ಇಲ್ಲ	೧೩

(ಡಿಸೆಂಬರ್ ೮೭ರ ವರೆಗೆ)

ಇ) ಉತ್ತರ ಕನ್ನಡ ಜಿಲ್ಲೆಯ ಪರಿಶಿಷ್ಟ ಜಾತಿಯ ವಿಮಾನುಗಾರರಿಗೆ ೧೯೮೭ ಡಿಸೆಂಬರ್ ವರೆಗೆ (ಅಂದರೆ ೧೯೮೬–೮೭ನೇ ಸಾಲಿನಲ್ಲಿ) ೫ ದೋಣಿಗಳನ್ನು ಒದಗಿಸಲಾಗಿದೆ. ಇದರಲ್ಲಿ ೧ ವಿಮಾನುಗಾರಿಕೆ ದೋಣಿಯನ್ನು ಕುಮಟಾ ತಾಲ್ಲೂಕಿಗೂ, ಹಾಗೂ ೪ ವಿಮಾನಂಗಾರಿಕೆ ದೋಣಿಗಳನ್ನು ಭಟ್ಕಳ ತಾಲ್ಲೂಕಿಗೂ ಕೊಡಲಾಗಿದೆ. ಇತರ ವಿಮಾನಂಗಾರರಿಗೆ ಈ ಸೌಲಭ್ಯ ಒದಗಿಸಿರುವುದಿಲ್ಲ.

ಈ) ಯಾಂತ್ರೀಕೃತ ಬೀಡಂಬಲೆ ದೋಣಿಗಳಿಗೆ ಸಹಾಯಧನ ನೀಡುವ ಯೋಜನೆಯು ಚಾಲ್ತಿಯಲ್ಲಿದೆ ಆದರೆ ಪರಿಶಿಷ್ಟ ಜಾತಿ ವಿಮಾನುಗಾರರಿಗೆ ಯಾಂತ್ರೀಕೃತ ದೋಣಿಗಳಿಗೆ ಸಹಾಯಧನವನ್ನು ಮಂಜೂರು ಮಾಡುವ ಯೋಜನೆಯನ್ನು ೧೯೮೭–೮೮ನೇ ಸಾಲಿನಲ್ಲಿ ಮುಂದುವರಿಸಿರುವುದಿಲ್ಲ.

ಉ) ಯಾಂತ್ರೀಕೃತ ಯೋಜನೆಯ ಮೂಲಕ ಈಗಾಗಲೇ ಪರಿಶಿಷ್ಟ ಜಾತಿಯ ವಿಮಾನುಗಾರರಿಗೆ ಸಾಕಷ್ಟು ನೆರವು ನೀಡಲಾಗಿರುವುದರಿಂದ, ೧೯೮೭–೮೮ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ವಿಮಾನುಗಾರ ವಂಚಿತೆಯರಿಗೆ ವಿಮಾನು ಒಣಗಿಸುವ ಹಾಗೂ ವಿಮಾನು ವ್ಯಾಪಾರಕ್ಕೋಸ್ಕರ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಹಾಯ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶಿಕಾರಿಪುರ ತಾಲ್ಲೂಕ್ ಹರಿಜನವಾಡ ರಸ್ತೆ ಕೆಲಸದ ಬಗ್ಗೆ

೧೧೯ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿಕಾರಿಪುರ ತಾಲ್ಲೂಕು ಹರಿಜನವಾಡ ರಸ್ತೆಗೆ ಈವರೆಗೆ ಖರ್ಚು ಮಾಡಿರುವ ಹಣವೆಷ್ಟು, (ಮಂಜೂರಾಗಿರುವ ರಸ್ತೆಗಳ ವಿವರವನ್ನೊದಗಿಸುವುದು) ?

ಆ) ೧೯೮೭–೮೮ನೇ ಸಾಲಿನ ಆಯವ್ಯದಲ್ಲಿ ಈ ಕೆಲಸಗಳಿಗೆ ಮಂಜೂರಾಗಿರುವ ಹಣವೆಷ್ಟು, ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ಮೇಲೆ ಈ ಕೆಲಸಕ್ಕೆ ಖರ್ಚು ಮಾಡಿರುವ ಹಣವೆಷ್ಟು ?